ಕಾಲೇಜಿನಲ್ಲಿ ಸಹಾಯಕ ಪ್ರಾಧ್ಯಾಪಕ. ತಾನೂ ಅದೇ ಬೀದರ ವೆಟರಿನರಿ ಕಾಲೇಜಿನಲ್ಲಿ ಓದಿ ಬಿ.ವಿ.ಎಸ್ಸಿ ; ಎ.ಎಚ್ ಪದವಿ ಪಡೆಯುತ್ತೇನೆ. ಮುಂದಿನ ವ್ಯಾಸಂಗಕ್ಕೆ ಅಮೇರಿಕಾಕ್ಕೆ ಬರುತ್ತೇನೆ. ಸರ್ಜರಿಯಲ್ಲಿ ಪಿ.ಎಚ್.ಡಿ ಮಾಡುತ್ತೇನೆ. ಈಗ ಕ್ಯಾಲಿಫೋರ್ನಿಯಾದಲ್ಲಿ ವೆಟರಿನರಿ ಕಾಲೇಜಿನಲ್ಲಿ ಕ್ಲಿನಿಕ್ಸ್ ಡಿಪಾರ್ಟ್‌ಮೆಂಟ್‌ನಲ್ಲಿ ಸರ್ಜನ್. ತನಗೆ ಒಳ್ಳೆಯ ಹೆಸರಿದೆ. ಗಂಡ ಹರೀಶ್ ಇಂಜಿನಿಯರ್, ಉದ್ಯಮಿ.

ಊಟದ ಟ್ರಾಲಿ ತಳ್ಳುತ್ತಾ ಅದೇ ಏರ್ ಹೋಸ್ಟೆಸ್ ಬರುತ್ತಾಳೆ. 'ಮ್ಯಾಮ್, ಮೀಲ್ಸ್... ಏಶಿಯನ್ ವೆಜಿಟೇರಿಯನ್...' ಎಂದಾಗ ಎಚ್ಚೆತ್ತುಕೊಳ್ಳುತ್ತೇನೆ. 'ಹೌದು...'ಎಂಬಂತೆ ತಲೆಯಾಡಿಸುತ್ತೇನೆ. ಇಷ್ಟು ಅಕ್ಕರೆಯಿಂದ ಮನೆಯಲ್ಲಿ ಎಂದೂ ಯಾರೂ ಗಮನಿಸಿಲ್ಲ ಎಂಬಂತೆ ಮುಗುಳ್ನಗೆಯ ಮೂಲಕ ಕೃತಜ್ಞತೆ ತಿಳಿಸುತ್ತೇನೆ. ಊಟ ಮುಗಿಸುತ್ತಿದ್ದಷ್ಟೇ ಗೊತ್ತು, ಕೂಡಲೇ ಮನಸ್ಸು ಹಳ್ಳಿಗೇ ಓಡಿತು.

ತಮ್ಮ ರಮೇಶ ಮನಸ್ಸಿಗೆ ಬರುತ್ತಾನೆ. ರಮೇಶನಿಗೂ ತನಗೂ ಏಳು ವರ್ಷ ಅಂತರ. ಚಿಕ್ಕಂದಿನಿಂದಲೂ ಅವನಿಗೆ ಆಧ್ಯಾತ್ಮಿಕದತ್ತಲೇ ಒಲವು. ವೇದಶಾಲೆಗೆ ಸೇರಿಕೊಂಡ. ವೇದಾಧ್ಯಯನ ಮಾಡಿದ. ಪ್ರತಿನಿತ್ಯ ತಪ್ಪದೆ ಯೋಗ ಮಾಡುತ್ತಾನೆ. ಧೈರ್ಯ ಜಾಸ್ತಿ. ಹಠಮಾರಿ ಸ್ವಭಾವ. ಗಂಭೀರ. ಜುಟ್ಟು ಗಡ್ಡ ಬಿಟ್ಟಿದ್ದಾನೆ. ಮಾತು ಕಡಿಮೆ. ನಗು ಅಪರೂಪ. ಒಮ್ಮೆ, ಅಂದರೆ ಒಂದು ವರ್ಷದ ಹಿಂದೆ ವ್ಯಾಟ್ಸಾಪ್ ನಲ್ಲಿ ನನ್ನೊಂದಿಗೆ ಮಾತಾಡಿದ. 'ಅಕ್ಕ, ನಮ್ಮೂರ ಪ್ರಭಾಕರರೆಡ್ಡಿ ಮಗ ಸಂತೋಷ್, ನನ್ನ ವಯಸ್ಸಿನವನೇ, ಒಳ್ಳೆಯ ಹುಡುಗ, ಬೆಂಗಳೂರು ಕಾರ್ಯಕ್ರಮ ಒಂದರಲ್ಲಿ ಸಿಕ್ಕಿದ. ನಮ್ಮೂರ ದೇವಸ್ಥಾನಕ್ಕೆ ಪೂಜೆ ಮಾಡಲು ಒಬ್ಬರು ಬೇಕು ಅಂತ ವಿಚಾರಿಸುತ್ತಿದ್ದ. ಮಾತನಾಡುತ್ತಾ ಮಾತನಾಡುತ್ತಾ ನಾನು ಬಾಪನಪಲ್ಲಿ ಶ್ರೀಧರಪ್ಪನ ಮಗ ಅಂತ ಗೊತ್ತಾದಾಗ ಬಂದುಬಿಡಿ ಸ್ವಾಮಿ, ನಮ್ಮೂರಲ್ಲಿ ಹೊಸದಾಗಿ ದೊಡ್ಡ ಚೌಡೇಶ್ವರಿ ದೇವಸ್ಥಾನ ಕಟ್ಟಿಸಿದ್ದೇವೆ. ಪೂಜೆ ಮಾಡಲು ಯಾರೂ ಸರಿಯಾದವರು ಸಿಗುತ್ತಾ ಇಲ್ಲ. ನೀವು ಬಂದು ಬಿಡಿ. ನಾನು ಎಲ್ಲಾ ಅನುಕೂಲ ಮಾಡಿ ಕೊಡುತ್ತೇನೆ. ನಿಮ್ಮ ಪೂರ್ವಿಕರ ಮನೆ, ತೋಟ ಇದೆ ಅಂತ ಹಠ ಹಿಡಿದ. ನಾನೂ ಊರಿಗೆ ಹೋಗುವ ಮನಸ್ಸು ಮಾಡಿದ್ದೇನೆ...' ಎಂದ. ಅವನ ಮಾತು ಕೇಳಿ ನನಗೆ ಅಚ್ಚರಿಯಾಯಿತು. ಅವನ ವಿದ್ವತ್ತಿಗೆ ಆ ಸಣ್ಣ ಹಳ್ಳಿ ನೆಲೆಯೇ. ಅದರಲ್ಲೂ ಅವನು ಬಾಪನಪಲ್ಲಿ ಹಳ್ಳಿ ಹೆಸರು ಹೇಳಿದರೇನೇ ಉರಿದು ಬೀಳುತ್ತಿದ್ದ. ಅವನನ್ನು ಅರ್ಥ ಮಾಡಿಕೊಳ್ಳುವುದೇ ಕಷ್ಟ. ಏನೋ, ಅವನಿಷ್ಟ. ನಾನೂ ಅವನಿಗೆ ಹೇಳಿದೆ 'ನಲ್ಲಗುಂಡ್ಲು ಕೊಂಡಕ್ಕೆ ನಮಸ್ಕಾರ ಮಾಡಿ ಊರಿಗೆ ಹೋಗು. ಸಾಧ್ಯವಿದ್ದಷ್ಟೂ ಬೆಟ್ಟದಲ್ಲಿರುವ ನಾಗರ ಕಟ್ಟೆಗೆ ಪೂಜೆ ಮಾಡುತ್ತಿರು' ಎಂದು. ಅದಕ್ಕೆ ಅವನು 'ಆಯಿತು' ಅಂದಿದ್ದಾನೆ. ಎಲ್ಲಾ ದೈವ ಪ್ರೇರಣೆ.

ಏರ್ ಹೋಸ್ಟೆಸ್ ಡ್ರಿಂಕ್ಸ್ ಬಾಟಲ್ ತುಂಬಿದ ಟ್ರಾಲಿ ತಳ್ಳುತ್ತಾ ಬರುತ್ತಾಳೆ. 'ಏನು ಕೊಡಲಿ ಮ್ಯಾಮ್' ಅನ್ನುತ್ತಾಳೆ. ಮೈಗೆ ಪ್ರಜ್ಞೆ ಬರುತ್ತದೆ. ಮರಳಿ ವಿಮಾನದೊಳಕ್ಕೆ ಬರುತ್ತೇನೆ. 'ಆಪಲ್ ಜ್ಯೂಸ್' ಅನ್ನುತ್ತೇನೆ. ಆಪಲ್ ಜ್ಯೂಸು ಹೀರುತ್ತಿದ್ದಂತೆ ಮನಸ್ಸು ಮತ್ತೆ ಹಳ್ಳಿಗೇ ಓಡಿತು.

ಅಪ್ಪ ನೆನಪಿಗೆ ಬರುತ್ತಾರೆ. ಊರಿಗೆ ನಮ್ಮದು ಒಬ್ಬರದೇ ಬ್ರಾಹ್ಮಣರ ಮನೆ. ಅಪ್ಪ ರೈತ. ಬಲು ಸಾಧು ಪ್ರಾಣಿ. ಆಧ್ಯಾತ್ಮಿ, ವೇದಾಂತಿ. ಭಯ ಜಾಸ್ತಿ. ಪದೇ ಪದೇ ಬದುಕಿನಲ್ಲಿ ಸೋಲುಂಡವರು. ತುಳಿತಕ್ಕೆ ಸಿಕ್ಕವರು. ಮೋಸ ಗೊತ್ತಿಲ್ಲ. ಸುಲಭವಾಗಿ ಬೇರೆಯವರನ್ನು ನಂಬುತ್ತಾರೆ. ಮೋಸ ಹೋಗುತ್ತಾರೆ. ಅದಕ್ಕೇ

## ಅವಳು

ಅವಳೆಂಬ
ಸ್ವಪ್ನ ಲಹರಿ
ಸದಾ
ಅರ್ಥೈಸಲಾಗದ
ಅಚ್ಚರಿ!

★ ಹೊಸಕೊಪ್ಪ ಶ್ರೀಧರ



ಈಶ್ವರ

ನಮ್ಮದು ಯಾವಾಗಲೂ ದಾರಿದ್ರ್ಯ ಬದುಕು. ಹಳ್ಳಿಗಳಲ್ಲಿ ಬೇಸಾಯ ಮಾಡುವುದು ಅಷ್ಟು ಸುಲಭದ ಮಾತಲ್ಲ. ನಮಗೆ ಒಂದೇ ಕಡೆ ಎರಡೂವರೆ ಎಕರೆ ಹೊಲ ಇತ್ತು. ನಂಬಿ ಮೋಸ ಹೋಗಿ ಅದನ್ನು ಕಳೆದುಕೊಂಡರು. ಅಪ್ಪ ಬಹಳ ಕೊರಗಿದರು. ಮನೆ ಹತ್ತಿರವೇ ಹತ್ತು ಕುಂಟೆ ತೋಟ ಇದೆ. ಅಪ್ಪ ನಮ್ಮೂರಿನ ಹಾಲಿನ ಡೈರಿಯಲ್ಲಿ ಲೆಕ್ಕ ನೋಡಿಕೊಳ್ಳುತ್ತಾರೆ. ಒಮ್ಮೆ ಅದರಲ್ಲಿ ಐದು ಲಕ್ಷ ರೂಪಾಯಿ ಲೆಕ್ಕ ತಪ್ಪಿತು. ಅವ್ಯವಹಾರವಾಗಿತ್ತು. ಊರಿನ ಜನ ನಮ್ಮ ಮನೆಗೆ ನುಗ್ಗಿದರು. ಅಡುಗೆ ಮನೆ, ದೇವರ ಮನೆಗೆ ನುಗ್ಗಿ ಅಪ್ಪನನ್ನು ಥಳಿಸಿದರು. ಗುಂಡು ಗುಂಡಗೆ ರಾಗಿ ಮುದ್ದೆ ಮಾಡುತ್ತಿದ್ದ ಅಮ್ಮ ಅಡ್ಡ ಬಂದಳು. ಅಮ್ಮನನ್ನು ತಳ್ಳಿದರು. ಹಣ ತಾನು ತೆಗೆದುಕೊಂಡಿಲ್ಲ ಅಂತ ಎಷ್ಟು ಬೇಡಿಕೊಂಡರೂ ಬಿಡಲಿಲ್ಲ. ಅಪ್ಪ ಅಮ್ಮನಿಗೆ ಬಹಳ ಬಾಧೆಯಾಯಿತು. ಮಂದಿ ಹೊಡೆದಿದ್ದಕ್ಕಲ್ಲ. ಅಡುಗೆ ಮನೆ, ದೇವರ ಮನೆಗೆ ಮಂದಿ ನುಗ್ಗಿದ್ದಕ್ಕೆ. ಎಂದೂ ಇತರೆ ಜನ ಅಲ್ಲಿಯವರೆಗೆ ಬಂದಿದ್ದಿಲ್ಲ. ಮಾನ ಮರ್ಯಾದೆ ಹೋಯಿತು ಅಂತ ತಿಳಿದರು. ನನಗೆ ತಿಳಿದಿರುವಂತೆ ಆ ಅಡುಗೆ ಮನೆ, ದೇವರ ಮನೆಯಲ್ಲಿ ಬರೀ ಬಡತನ ಬಿಟ್ಟರೆ ಬೇರೇನೂ ಇರಲಿಲ್ಲ. ಆದರೂ ಅದು ಬ್ರಾಹ್ಮಣರ, ಅಪ್ಪ ಅಮ್ಮನ, ಗುಸು ಗುಸು, ಗುಟ್ಟು ಗುಟ್ಟು, ಆಚಾರ ವಿಚಾರಗಳ, ಮಾನ ಮರ್ಯಾದೆಗಳ, ಭಯ ಭಕ್ತಿ ಭಾವನೆಗಳ ಮಡಿ ಮನೆ ! ಭವ್ಯ ಮಂದಿರ !

ಮೂರು ದಿನ ಕಳೆದಿತ್ತು. ನನಗೆ ಏಳನೇ ತರಗತಿಯ ಫೈನಲ್ ಎಕ್ಸಾಮ್ ನಡೆಯುತ್ತಿತ್ತು. ನನಗೆ ಇನ್ನೂ ಜ್ಞಾಪಕ ಇದೆ. ಅಂದು ಗುರುವಾರ ರಾತ್ರಿ. ನಾನು ಓದಿಕೊಳ್ಳುತ್ತಿದ್ದೆ. ರಾತ್ರಿ ಹತ್ತು ಗಂಟೆ ಇರಬಹುದು. ಅಮ್ಮ ಅಪ್ಪ ಸ್ನಾನ ಮಾಡಿಕೊಂಡು ಬಂದರು. ಮಡಿಯಲ್ಲಿ ದೇವರ ಮುಂದೆ ಕುಳಿತುಕೊಂಡರು. ಬಹಳ ಹೊತ್ತು ಕಣ್ಣು ಮುಚ್ಚಿಕೊಂಡು ಮೌನವಾಗಿ ಕುಳಿತುಕೊಂಡರು. ಓದುತ್ತಾ ಓದುತ್ತಾ ಹಾಗೆಯೇ ನಾನು ತೂಕಡಿಸಿಬಿಟ್ಟೆ. ಬೆಳಗ್ಗೆ ಎದ್ದಾಗ ಮನೆ ಮುಂದೆ ಮಂದಿ ಸೇರಿದ್ದರು. ಗಲಾಟೆ. ಆಗ ತಿಳಿಯಿತು. ಅಮ್ಮ ಅಪ್ಪ ನಮ್ಮ ಮಾವಿನ ತೋಟದಲ್ಲಿ ಹುಣಿಸೆಮರಕ್ಕೆ ನೇಣು ಹಾಕಿಕೊಂಡಿದ್ದಾರೆಂದು. 'ಪಾಪ, ಸ್ವಾಮಿ ಒಳ್ಳೆಯವರು. ದೇವರಂಥ ಮನುಷ್ಯರು. ಅವರು ದುಡ್ಡು ಹೊಡೆದಿಲ್ಲ. ಡೈರಿ ಪ್ರೆಸಿಡೆಂಟು, ಮೆಂಬರುಗಳೇ ಹಣ ತಿಂದಿರೋದು..' ಎಂದು ಜನ ಗುಸು ಗುಸು ಮಾತನಾಡಿಕೊಳ್ಳುತ್ತಿದ್ದರು. ವಿಧಿ ವಿಧಾನಗಳೆಲ್ಲಾ ನಡೆಯಿತು. ನಮ್ಮ ತೋಟದಲ್ಲೇ ಆ ಹುಣಸೇ ಮರದ ಮುಂದೆಯೇ ಇಬ್ಬರನ್ನೂ ಸುಟ್ಟರಂತೆ. ನನ್ನನ್ನು ಅಲ್ಲಿಗೆ ಹೋಗಲು ಬಿಡಲಿಲ್ಲ. ಬೀದರಿನಿಂದ ಬಂದ ಪ್ರಕಾಶ ಮಾವ ಅಂತೇಷ್ಟಿ ಕಾರ್ಯ ಮಾಡಿ ಮುಗಿಸಿದರು. ಪ್ರಕಾಶ ಮಾವ ನನ್ನನ್ನೂ ನನ್ನ ತಮ್ಮನನ್ನೂ ಕರೆದುಕೊಂಡು ಬೀದರಿಗೆ ಹೊರಟು ಬಂದರು. ಆಗ ನನಗೆ ಹದಿಮೂರು ವರ್ಷ. ತಮ್ಮನಿಗೆ ಆರು ವರ್ಷ. ಈಗ ಆ ತೋಟಕ್ಕೆ ಹೋಗಬೇಕು. ಆ ಹುಣಿಸೆ ಮರದ ಮುಂದೆ ಒಂದು ಗಂಟೆ ಮೌನವಾಗಿ ಕೂರಬೇಕು.

* * *

ಕನಮನಪಲ್ಲಿಯಲ್ಲಿ ಬಸ್ಸಿನಿಂದ ಇಳಿದಾಗ ಅಲ್ಲೇ ನಿಂತಿದ್ದ ಭುವನ 'ಮಯೂರಿ...' ಅಂತ ಹಲ್ಲು ಕಿರಿಯುತ್ತಾಳೆ. ನನ್ನ ಬಳಿ ಇದ್ದ ಎರಡರಲ್ಲಿ ಒಂದು ಬ್ಯಾಗನ್ನು ಕಿತ್ತುಕೊಳ್ಳುತ್ತಾಳೆ. ನಾವು ಶಾಲೆಯಲ್ಲಿ ಓದಿದ್ದು ಕನ್ನಡ. ಆದರೆ ಊರು ಭಾಷೆ ತೆಲುಗು. ಆಂಧ್ರ ರಾಯಲಸೀಮೆಗೆ ಗಡಿಯಲ್ಲಿ ನಮ್ಮೂರು. ತೆಲುಗಿನಲ್ಲೇ ಮಾತನಾಡುತ್ತಾ ಹೆಜ್ಜೆ ಹಾಕುತ್ತೇವೆ.

'ಇವತ್ತು ಬೆಳಗ್ಗೆ ರಮೇಶಪ್ಪ ಸ್ವಾಮಿ ಹೇಳಿದ್ರು ... ನೀನು ಬರ್ತಿಯಾ ಅಂತ... ಎಲ್ಲಾ ವಿಷಯಾನೂ ಹೇಳಿದ್ರು... ನಿನ್ನ ಕರಕೊಂಡು ಬಾ ಅಂತ ಹೇಳಿದ್ರು... ಅವರೇ ಬರ್ತಿದ್ರು... ಆದ್ರೆ... ಊರಲ್ಲಿ ಚೌಡೇಶ್ವರಿ ಅಮ್ಮನ ಸಪ್ತಾಹ ಪೂಜೆ ನಡೆಯ್ತಾ ಇದೆ... ಪೂಜೆ ಹೋಮ ಇದೆ... ಸ್ವಾಮಿ ಬಿಜಿ...'

'ನಾನೇ ನಮ್ಮ ಸ್ಕೂಲು ಹೆಡ್ ಮಾಸ್ಟರ್ ಗೆ ಹೇಳಿಲ್ಲ... ನೀನು ಬರೋದು... ಇಲ್ಲಾಂದ್ರೆ ಸ್ಕೂಲು ಮಕ್ಕಳನ್ನೆಲ್ಲಾ ಕರಕೊಂಡು ಬಂದು ನಿನ್ನ ಸ್ವಾಗತ ಮಾಡ್ತಾ ಇದ್ರು...'

ತಾನೇ ಮಾತಾಡುತ್ತಾ ನಡೆಯುತ್ತಿದ್ದ ಭುವನ ನನ್ನ ಭುಜ ತಟ್ಟಿ 'ನೋಡು, ನಾವು ಓದಿದ ಸ್ಕೂಲು ಇದೇನೇ... ನಾನು ಇಲ್ಲೇನೇ ಕೆಲಸ ಮಾಡೋದು...

ಸ್ಕೂಲಿನತ್ತ ಕಣ್ಣು ಹಾಯಿಸುತ್ತೇನೆ. ತಾನು ಈ ಶಾಲೆಯಲ್ಲಿ ಓದುತ್ತಿದ್ದಾಗ ಶಾಲಾ ಕಟ್ಟಡ ದೊಡ್ಡದಾಗಿ ಕಾಣುತ್ತಿತ್ತು. ಈಗ ಅದೇ ಕಟ್ಟಡ ತೀರಾ